ಕರ್ನಾಟಕ ಸರ್ಕಾರ

# ಲೋಕ ಶಿಕ್ಷಣ ನಿರ್ದೇಶನಾಲಯ,

## 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03

# 2012–13ನೇ ಸಾಲಿನ ವಾರ್ಷಿಕ ವರದಿ

*ಕರ್ನಾಟಕ ಸರ್ಕಾರದ ಲೋಕ ಶಿಕ್ಷಣ ನಿರ್ದೇಶನಾಲಯ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03*

**Tele Ph**: 23444870/871, 23313125

**Fax**: 23313135, 23565209

## 1) ಲೋಕ ಶಿಕ್ಷಣ ನಿರ್ದೇಶನಾಲಯದ ಸಂಕ್ಷಿಪ್ತ ಮಾಹಿತಿ ಮತ್ತು ರಚನೆ

ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಯಸ್ಕರ ಶಿಕ್ಷಣ ನಿರ್ದೇಶನಾಲಯ 1978–79ರಲ್ಲಿ ಸ್ಥಾಪಿಸಲಾಯಿತು. 1988–89ರಲ್ಲಿ ನಿರ್ದೇಶನಾಲಯಕ್ಕೆ ಲೋಕ ಶಿಕ್ಷಣ ನಿರ್ದೇಶನಾಲಯ ಎಂದು ಹೆಸರು ಬದಲಾಯಿಸಲಾಯಿತು. ಈ ನಿರ್ದೇಶನಾಲಯವು ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಜಿಲ್ಲಾ ಸಾಕ್ಷರತಾ ಸಮಿತಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಯಕ್ರಮದ ಅನುಷ್ಠಾನದಲ್ಲಿ ಅಗತ್ಯವಾದ ಮಾರ್ಗದರ್ಶನ, ಸೂಚನೆ ಮತ್ತು ಮಾರ್ಗೋಪಾಯಗಳಿಗೆ ಸಂಬಂಧಿಸಿದಂತೆ ನಿರ್ದೇಶನ ಮತ್ತು ತರಬೇತಿ ನೀಡಲಾಗುತ್ತದೆ. ಈ ನಿರ್ದೇಶನಾಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದೇ ಇರುವುದರಿಂದ ಪ್ರಧಾನವಾಗಿ ಶಿಕ್ಷಣ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ನಿಯೋಜನೆ ಮೇರೆಗೆ ತೊಡಗಿಸಿಕೊಂಡು ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

**ರಚನಾ ಸೂಚಿ:**




**ಜಿಲ್ಲಾಮಟ್ಟದಲ್ಲಿ 30 ಕಂದಾಯ ಜಿಲ್ಲೆಗಳು ಮತ್ತು 2 ಶೈಕ್ಷಣಿಕ ಜಿಲ್ಲೆಗಳೂ ಸೇರಿ ಒಟ್ಟು 32 ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಹಾಗೂ ಸಿಬ್ಬಂದಿಗಳು.**

<u>ಲೋಕ ಶಿಕ್ಷಣ ನಿರ್ದೇಶನಾಲಯಕ್ಕೆ ಮಂಜೂರಾದ ಹುದ್ದೆಗಳು</u>

**(2012–13)**

| ಕ್ರ ಸಂ | ಹುದ್ದೆ | ಮಂಜೂರಾದ ಸಂಖ್ಯೆ | ಭರ್ತಿಯಾದ ಹುದ್ದೆಗಳು | ಖಾಲಿ ಹುದ್ದೆ | ಷರಾ |
|---|---|---|---|---|---|
| 1. | ನಿರ್ದೇಶಕರು | 01 | 01 | 00 | |
| 2. | ಉಪನಿರ್ದೇಶಕರು(ಆಡಳಿತ) | 01 | 01 | 00 | |
| 3. | ಉಪನಿರ್ದೇಶಕರು(ಕಾರ್ಯಕ್ರಮ) | 01 | 01 | 00 | |
| 4. | ಸಹಾಯಕ ನಿರ್ದೇಶಕರು(ಆಡಳಿತ) | 01 | 01 | 00 | |
| 5. | ಸಹಾಯಕ ನಿರ್ದೇಶಕರು(ಕಾರ್ಯಕ್ರಮ) | 01 | 01 | 00 | |
| 6. | ಸಹಾಯಕ ನಿರ್ದೇಶಕರು(ಯೋಜನೆ) | 01 | 01 | 00 | |
| 7. | ಸಹಾಯಕ ನಿರ್ದೇಶಕರು(ಎಂ&ಇ) | 01 | 01 | 00 | |
| 8. | ಲೆಕ್ಕಾಧಿಕಾರಿ | 01 | 01 | 00 | |
| 9. | ಲೆಕ್ಕಪರಿಶೋಧನಾಧಿಕಾರಿ | 01 | 01 | 00 | |
| 10 | ಅಧೀಕ್ಷಕರು | 01 | 01 | 00 | |
| 11. | ಲೆಕ್ಕ ಅಧೀಕ್ಷಕರು | 01 | 01 | 00 | |
| 12 | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 02 | 01 | 01 | |
| 13. | ಶೀಘ್ರಲಿಪಿಗಾರರು | 02 | 00 | 02 | |
| 14 | ಪ್ರಥಮ ದರ್ಜೆ ಸಹಾಯಕರು | 04 | 03 | 01 | |
| 15. | ದ್ವಿತೀಯ ದರ್ಜೆ ಸಹಾಯಕರು | 03 | 02 | 01 | |
| 16. | ಸಿ.ಸಿ.ಟಿ | 02 | 02 | 00 | |
| 17. | ವಾಹನ ಚಾಲಕರು | 03 | 01 | 02 | |
| 18. | 'ಡಿ' ಗುಂಪಿನ ನೌಕರರು' | 04 | 00 | 04 | |
| | **ಒಟ್ಟು** | **31** | **20** | **11** | |
| | **ಜಿಲ್ಲಾ ಮಟ್ಟದಲ್ಲಿ ಮಂಜೂರಾದ ಹುದ್ದೆಗಳ ವಿವರ** | | | | |
| 20 | ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು | 32 | 24 | 08 | |
| 21 | ಕಾರ್ಯಕ್ರಮ ಸಹಾಯಕರು | 32 | 21 | 11 | |
| 22 | ಪ್ರ.ದ.ಸ | 08 | 05 | 03 | |
| 23 | ಶೀಘ್ರಲಿಪಿಗಾರರು | 03 | 1 | 02 | |
| 24 | ದ್ವಿ.ದ.ಸ/ಬೆರಳಚ್ಚುಗಾರರು | 24 | 11 | 13 | |
| 25 | ಬೆರಳಚ್ಚುಗಾರರು | 08 | 04 | 04 | |
| 26 | ವಾಹನ ಚಾಲಕರು | 08 | 03 | 05 | |
| 27 | ಡಿ.ದರ್ಜೆ ನೌಕರರು | 32 | 16 | 16 | |
| | **ಒಟ್ಟು** | **147** | **85** | **62** | |
| | **ಎಲ್ಲಾ ಒಟ್ಟು** | **178** | **105** | **73** | |

**ಕರ್ನಾಟಕ ಸರ್ಕಾರ**
**ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, ಲೋಕ ಶಿಕ್ಷಣ ನಿರ್ದೇಶನಾಲಯ**
**6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 03.**

## ಲೋಕಶಿಕ್ಷಣ ನಿರ್ದೇಶನಾಲಯದಲ್ಲಿ ಕೆಲಸ ಕಾರ್ಯಗಳನ್ನು ಹೊರಗುತ್ತಿಗೆ ನೀಡಿರುವ ವಿವರ

| ಕ್ರ. ಸಂ | ಕೆಲಸದ ವಿವರ | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ |
|---|---|---|
| 1 | ಇ–ಆಡಳಿತ ವಿಭಾಗ– ಪ್ರೋಗ್ರಾಮರ್ | 01 |
| 2 | ಇ–ಆಡಳಿತ ವಿಭಾಗ– ಡಾಟಾ ಎಂಟ್ರಿ ಆಪರೇಟರ್ | 03 |
| 3 | ತೋಟಗಾರಿಕೆ ನಿರ್ವಹಣೆ | 01 |
| 4 | ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯ ಮಟ್ಟದ ಸಂಯೋಜಕರು | 05 |
| 5 | ಸಾಕ್ಷರ ಭಾರತ್ ಕಾರ್ಯಕ್ರಮದ ದಾಖಲೀಕರಣ ನಿರ್ವಾಹಕರು | 01 |
| 6 | ಸಾಕ್ಷರ ಭಾರತ್ ಕಾರ್ಯಕ್ರಮದ ಲೆಕ್ಕ ನಿರ್ವಾಹಕರು | 01 |

## 2012-13ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಮಂಜೂರಾಗಿರುವ ಅನುದಾನದ ಆರ್ಥಿಕ ಮತ್ತು ಭೌತಿಕ ಪ್ರಗತಿ

| ಲೆಕ್ಕ ಶೀರ್ಷಿಕೆ | ಯೋಜನೆ | | | | | | ಯೋಜನೇತರ | |
|---|---|---|---|---|---|---|---|---|
| | ಆರ್ಥಿಕ | | ಭೌತಿಕ | | | | ಆರ್ಥಿಕ | |
| | ಮಂಜೂರಾತಿ / ಬಿಡುಗಡೆ (ರೂ.ಲಕ್ಷ ಗಳಲ್ಲಿ) | ವೆಚ್ಚ (ರೂ.ಲಕ್ಷ ಗಳಲ್ಲಿ) | ಕಾರ್ಯಕ್ರಮಗಳು | ಗುರಿ | ದಾಖಲಾತಿ | ಕಲಿಕೆ ಭಾಗ–3/ ತರಬೇತಿ ಪೂರ್ಣ ಗೊಳಿಸಿ ದವರು | ಮಂಜೂ ರಾತಿ (ರೂ.ಲಕ್ಷ ಗಳಲ್ಲಿ) | ವೆಚ್ಚ (ರೂ.ಲಕ್ಷ ಗಳಲ್ಲಿ) |
| 2202–04–001–0–02–059 ರಾಜ್ಯ ಮಟ್ಟದ ಸಾಕ್ಷರತಾ ಕಾರ್ಯಕ್ರಮಗಳು | 45.00 | 45.00 | ಹಿಂದುಳಿದ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಸಾಕ್ಷರತಾ ಕಾರ್ಯಕ್ರಮ | 23000 | 22703 | 20285 | 0 | 0 |
| 2202–04–001–0–02–422 ಎಸ್‌ಸಿಪಿ | 55.00 | 55.00 | ವಿಶೇಷ ಘಟಕ ಯೋಜನೆ–ಸಾಕ್ಷರ ಭಾರತ್ | 219573 | 294725 | 294725 | 0 | 0 |
| 2202–04–001–0–02–423 ಟಿಎಸ್‌ಪಿ | 25.00 | 25.00 | ಗಿರಿಜನ ಉಪಯೋಜನೆ–ಸಾಕ್ಷರ ಭಾರತ್ | 124616 | 150122 | 150122 | 0 | 0 |
| 2202–04–001–0–03 –059 ಶಿಕ್ಷಣ ಕೇಂದ್ರಗಳ ಮುಂದುವರಿಕೆ | 74.70 | 74.70 | ಶಿಕ್ಷಣ ಕೇಂದ್ರಗಳ ಮುಂದುವರಿಕೆ ನವಸಾಕ್ಷರರ ವೃತ್ತಿಕೌಶಲ ತರಬೇತಿ | 4980 | 5740 | 5740 | 0 | 0 |
| 2202–04–001–0–03–422 | 50.30 | 50.30 | ವಿಶೇಷ ಘಟಕ ಯೋಜನೆ ಅಡಿ ಪರಿಶಿಷ್ಟ ಜಾತಿ ನವಸಾಕ್ಷರರಿಗೆ ವೃತ್ತಿ ಕೌಶಲ್ಯಾಭಿವೃದ್ಧಿ ತರಬೇತಿ | 3353 | 3620 | 3620 | 0 | 0 |
| 2202–04–001–0–03–423 | 25.00 | 25.00 | ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ನವಸಾಕ್ಷರರಿಗೆ ವೃತ್ತಿ ಕೌಶಲ್ಯಾಭಿವೃದ್ದಿ ತರಬೇತಿ | 1666 | 1680 | 1680 | 0 | 0 |
| 2202–04–001–0–05–101 | 1495.00 | 1495.00 | ಸಾಕ್ಷರ ಭಾರತ್ | 1414320 | 553309 | 553309 | 0 | 0 |
| 2202–04–001–0–01 ಆಡಳಿತ ಬಲವರ್ಧನೆ | 30.00 | 28.80<br>1.20 | ರಾಜ್ಯ ಮಟ್ಟ ಆಡಳಿತ ಬಲವರ್ಧನೆ<br>ಅದ್ಯರ್ಪಣೆ | – | – | – | 87.86 | 87.86<br>+ 5.63 |
| **ಒಟ್ಟು** | 1800.00 | 1800.00 | | – | – | – | **87.86** | **93.49** |
| 2202–04–101–0–01 ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಸಹಾಯನುದಾನ | 50.00 | 50.00 | ವಿದ್ಯಾಪೀಠಗಳಲ್ಲಿ ಗ್ರಾಮಿಣ ಯುವಕ ಯುವತಿಯರಿಗೆ ವೃತ್ತಿ ಕೌಶಲ್ಯ ತರಬೇತಿ | 1040 | 804 | 798 | (O)<br>224.33<br>(S)<br>31.42 | 254.62<br><br>1.13<br>ಅದ್ಯರ್ಪಣೆ |
| **ಒಟ್ಟು** | 1850.00 | 1850.00 | | – | – | – | **255.75** | **255.75** |

## 2012-13ನೇ ಸಾಲಿನಲ್ಲಿ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗಿರುವ ವಿವಿಧ ಸಾಕ್ಷರತಾ ಕಾರ್ಯಕ್ರಮಗಳ ಪ್ರಗತಿ ವಿವರ

| ಕ್ರ. ಸಂ | ಕಾರ್ಯಕ್ರಮಗಳು | ಗುರಿ | ದಾಖಲಾತಿ | ಸಾಧನೆ ಭಾಗ-3/ ತರಬೇತಿ ಪೂರ್ಣಗೊಳಿಸಿದ ಕಲಿಕಾರ್ಥಿಗಳು |
|---|---|---|---|---|
| 1 | ಡಾ॥ ನಂಜುಂಡಪ್ಪ ವರದಿ ಅನ್ವಯ ಹಿಂದುಳಿದ ತಾಲ್ಲೂಕುಗಳಲ್ಲಿ ಸಾಕ್ಷರತಾ ಕಾರ್ಯಕ್ರಮ | 23000 | 22703 | 20285 |
| 2 | ವಿಶೇಷ ಘಟಕ ಯೋಜನೆ ಅನುದಾನ: ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಾಗಿ ಬಳಕೆ | 219573 | 294725 | 294725 |
| 3 | ಗಿರಿಜನ ಉಪಯೋಜನೆ ಅನುದಾನ: ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಾಗಿ ಬಳಕೆ | 124616 | 150122 | 150122 |
| 4 | ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ (ಸಿಇಪಿ)- ನವಸಾಕ್ಷರರ ವೃತ್ತಿ ಕೌಶಲ ತರಬೇತಿ | 4980 | 5740 | 5740 |
| 5 | ವಿಶೇಷ ಘಟಕ ಯೋಜನೆ ಅಡಿ ಪರಿಶಿಷ್ಟ ಜಾತಿ ನವಸಾಕ್ಷರರಿಗೆ ಜೀವನ ಕೌಶಲಾಭಿವೃದ್ಧಿ ತರಬೇತಿ | 3620 | 3620 | 3620 |
| 6 | ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ನವಸಾಕ್ಷರರಿಗೆ ಕೌಶಲ್ಯಾಭಿವೃದ್ಧಿ ತರಬೇತಿ | 1680 | 1680 | 1680 |
| 7 | ಸಾಕ್ಷರ ಭಾರತ್ | 1414320 | 553309 | 553309 |
| 8 | ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ | 1040 | 804 | 798 |

### 2012-13 ನೇ ಸಾಲಿನ ಕಾರ್ಯಕ್ರಮಗಳ ವಿವರ

**ರಾಜ್ಯ ಮಟ್ಟದ ಸಾಕ್ಷರತಾ ಕಾರ್ಯಕ್ರಮ** ಹಿಂದುಳಿದ ತಾಲ್ಲೂಕುಗಳಲ್ಲಿ ಸಾಕ್ಷರತಾ ಕಾರ್ಯಕ್ರಮಕ್ಕೆ ಲೆಕ್ಕಶೀರ್ಷಿಕೆ 2202-04-001-0-02-059 ಅಡಿ ರೂ.45.00 ಲಕ್ಷಗಳು ಮಂಜೂರಾಗಿದ್ದು, 23000 ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಲು ಕಾರ್ಯಕ್ರಮ ಹಮ್ಮಿಕೊಂಡಿದ್ದು, 22703 ಕಲಿಕಾರ್ಥಿಗಳು ದಾಖಲಾಗಿ 20285 ಅನಕ್ಷರಸ್ಥರು ಭಾಗ-3ನ್ನು ಪೂರ್ಣಗೊಳಿಸಿರುತ್ತಾರೆ.

**2012–13ನೇ ಸಾಲಿನಲ್ಲಿ ಡಾ|| ನಂಜುಂಡಪ್ಪ ವರದಿಯನ್ವಯ ಹಿಂದುಳಿದ ತಾಲ್ಲೂಕುಗಳಲ್ಲಿ ಮಾರ್ಚ್ ಅಂತ್ಯಕ್ಕೆ ಸಾಕ್ಷರತಾ ಕಾರ್ಯಕ್ರಮದ ಕ್ರೋಢೀಕೃತ ವರದಿ**

| ಕ್ರ. ಸಂ | ಜಿಲ್ಲೆ | ಕೇಂದ್ರಗಳ ಗುರಿ | ಅನಕ್ಷರಸ್ಥರ ಗುರಿ | ದಾಖಲಾತಿ | | | ಭಾಗ–3 ಮುಗಿಸಿದವರು | | |
|---|---|---|---|---|---|---|---|---|---|
| | | | | ಗಂ | ಹೆ | ಒ | ಗಂ | ಹೆ | ಒ |
| 1 | ದಾವಣಗೆರೆ | 550 | 5500 | 1750 | 3750 | 5500 | 1750 | 3750 | 5500 |
| 2 | ಧಾರವಾಡ | 550 | 5500 | 1803 | 3697 | 5500 | 1560 | 3319 | 4879 |
| 3 | ಹಾಸನ | 550 | 5500 | 1004 | 4496 | 5500 | 760 | 3449 | 4209 |
| 4 | ಚಿಕ್ಕಮಗಳೂರು | 220 | 2200 | 972 | 1228 | 2200 | 972 | 1228 | 2200 |
| 5 | ಉತ್ತರ ಕನ್ನಡ | 210 | 2100 | 327 | 1596 | 1923 | 290 | 1497 | 1787 |
| 6 | ಶಿವಮೊಗ್ಗ | 220 | 2200 | 910 | 1170 | 2080 | 806 | 904 | 1710 |
| | **ಒಟ್ಟು** | **2300** | **23000** | **6766** | **15937** | **22703** | **6138** | **14147** | **20285** |

**ವಿಶೇಷ ಘಟಕ ಯೋಜನೆ:–** ಲೆಕ್ಕ ಶೀರ್ಷಿಕೆ 2202–04–001–0–02–422 ರಾಜ್ಯದ 18 ಜಿಲ್ಲೆಗಳಲ್ಲಿ 15+ ವಯೋಮಿತಿಯ ಪರಿಶಿಷ್ಠ ಜಾತಿ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಲು ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಿನ ಅನುದಾನವಾಗಿ ಈ ಕಾರ್ಯಕ್ರಮದಡಿಯಲ್ಲಿ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರಕ್ಕೆ ರೂ.55.00 ಲಕ್ಷಗಳು ಬಿಡುಗಡೆಯಾಗಿದ್ದು, ಈ ಅನುದಾನವನ್ನು ಬಳಸಿಕೊಂಡು ಪರಿಶಿಷ್ಠ ಜಾತಿಯ 294725 ಕಲಿಕಾರ್ಥಿಗಳು ಸಾಕ್ಷರ ಭಾರತ್ ಕಾರ್ಯಕ್ರಮದ ಮೂಲಕ ಭಾಗ–3ನ್ನು ಪೂರ್ಣಗೊಳಿಸಿರುತ್ತಾರೆ.

**ಗಿರಿಜನ ಉಪ ಯೋಜನೆ:– ಲೆಕ್ಕ ಶೀರ್ಷಿಕೆ** 2202–04–001–0–02–423 ರಾಜ್ಯದ 18 ಜಿಲ್ಲೆಗಳಲ್ಲಿ 15+ ವಯೋಮಿತಿಯ ಪರಿಶಿಷ್ಠ ಪಂಗಡ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಲು ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಿನ ಅನುದಾನವಾಗಿ ಈ ಕಾರ್ಯಕ್ರಮದಡಿಯಲ್ಲಿ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರಕ್ಕೆ ರೂ.25.00 ಲಕ್ಷಗಳು ಬಿಡುಗಡೆಯಾಗಿದ್ದು, ಈ ಅನುದಾನವನ್ನು ಬಳಸಿಕೊಂಡು ಪರಿಶಿಷ್ಠ ಪಂಗಡದ 150122ಕಲಿಕಾರ್ಥಿಗಳು ಸಾಕ್ಷರ ಭಾರತ್ ಕಾರ್ಯಕ್ರಮದ ಮೂಲಕ ಭಾಗ–3ನ್ನು ಪೂರ್ಣಗೊಳಿಸಿರುತ್ತಾರೆ.

**ಶಿಕ್ಷಣ ಕೇಂದ್ರಗಳ ಮುಂದುವರಿಕೆ:–** ಲೆಕ್ಕಶೀರ್ಷಿಕೆ 2202–04–001–0–03–059 ಅಡಿ ಮಂಜೂರಾಗಿದ್ದ, ರೂ.74.70 ಲಕ್ಷಗಳನ್ನು ನವಸಾಕ್ಷರರ ವೃತ್ತಿ ಕೌಶಲ ತರಬೇತಿ ಕಾರ್ಯಕ್ರಮದಡಿಯಲ್ಲಿ 5740 ಕಲಿಕಾರ್ಥಿಗಳು ದಾಖಲಾಗಿ ಭಾಗ–3ನ್ನು ಪೂರ್ಣಗೊಳಿಸಿರುತ್ತಾರೆ.

## ಸಾಮಾನ್ಯ ವರ್ಗದ ನವಸಾಕ್ಷರರ ವೃತ್ತಿ ಕೌಶಲ ತರಬೇತಿ ಕಾರ್ಯಕ್ರಮದ ಪ್ರಗತಿ ವರದಿ ಮಾರ್ಚ್ 2013

| ಕ್ರ ಸಂ | ಜಿಲ್ಲೆ | ಕ್ರಿಯಾ ಯೋಜನೆ ಪ್ರಕಾರ ಶಿಬಿರಗಳ ಗುರಿ | ನವಸಾಕ್ಷರರ ಗುರಿ | ತರಬೇತಿಗೆ ನವಸಾಕ್ಷರರ ದಾಖಲಾತಿ | | | ತರಬೇತಿ ಪೂರ್ಣಗೊಳಿಸಿದವರು | | |
|---|---|---|---|---|---|---|---|---|---|
| | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಬೀದರ್ | 18 | 360 | 0 | 360 | 360 | 0 | 360 | 360 |
| 2 | ರಾಮನಗರ | 4 | 80 | 0 | 80 | 80 | 0 | 80 | 80 |
| 3 | ಮೈಸೂರು | 24 | 480 | 20 | 460 | 480 | 20 | 460 | 480 |
| 4 | ಮಂಡ್ಯ | 24 | 480 | 0 | 480 | 480 | 0 | 480 | 480 |
| 5 | ರಾಯಚೂರು | 40 | 800 | 0 | 800 | 800 | 0 | 800 | 800 |
| 6 | ತುಮಕೂರು/ ಮಧುಗಿರಿ | 37 | 740 | 0 | 740 | 740 | 0 | 740 | 740 |
| 7 | ಹಾಸನ | 2 | 40 | 0 | 40 | 40 | 0 | 40 | 40 |
| 8 | ಬೆಳಗಾಂ/ಚಿಕ್ಕೋಡಿ | 35 | 700 | 0 | 680 | 680 | 0 | 680 | 680 |
| 9 | ಬೆಂಗಳೂರು (ಗ್ರಾ) | 14 | 280 | 8 | 252 | 260 | 8 | 252 | 260 |
| 10 | ಬೆಂಗಳೂರು(ನ) | 3 | 60 | 0 | 60 | 60 | 0 | 60 | 60 |
| 11 | ಗುಲ್ಬರ್ಗ | 15 | 300 | 0 | 300 | 300 | 0 | 300 | 300 |
| 12 | ಬಾಗಲಕೋಟೆ | 23 | 460 | 0 | 460 | 460 | 0 | 460 | 460 |
| 13 | ಯಾದಗಿರಿ | 3 | 60 | 0 | 60 | 60 | 0 | 60 | 60 |
| 14 | ಬಿಜಾಪುರ | 7 | 140 | 0 | 140 | 140 | 0 | 140 | 140 |
| 15 | ಚಿಕ್ಕಬಳ್ಳಾಪುರ | 5 | 100 | 0 | 100 | 100 | 0 | 100 | 100 |
| 16 | ಚಿತ್ರದುರ್ಗ | 4 | 80 | 0 | 80 | 80 | 0 | 80 | 80 |
| 17 | ಗದಗ್ | 10 | 200 | 0 | 200 | 200 | 0 | 200 | 200 |
| 18 | ಬಳ್ಳಾರಿ | 8 | 160 | 0 | 160 | 160 | 0 | 160 | 160 |
| 19 | ಕೋಲಾರ | 8 | 160 | 0 | 160 | 160 | 0 | 160 | 160 |
| 20 | ಕೊಪ್ಪಳ | 5 | 100 | 0 | 100 | 100 | 0 | 100 | 100 |
| | **ಒಟ್ಟು** | **289** | **5780** | **28** | **5712** | **5740** | **28** | **5712** | **5740** |

**ವಿಶೇಷ ಘಟಕ ಯೋಜನೆ:– ಲೆಕ್ಕ ಶೀರ್ಷಿಕೆ** 2202–04–001–0–03–422 ಅಡಿಯಲ್ಲಿ ರೂ.50.30 ಲಕ್ಷಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಂಡಿರುವ ಹಾಗೂ ಅನುಷ್ಠಾನಗೊಳಿಸಲಾಗುತ್ತಿರುವ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ನವಸಾಕ್ಷರರಾಗಿರುವ 15+ ವಯೋಮಾನದ 3360 ಪರಿಶಿಷ್ಟ ಜಾತಿಯ ನವಸಾಕ್ಷರರಿಗಾಗಿ,

20–30 ಜನರ ಗುಂಪುಗಳಲ್ಲಿ ವೃತ್ತಿ ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರಗಳನ್ನು ಏರ್ಪಡಿಸುವ ಗುರಿ ಹೊಂದಿದ್ದು, ಈ ಕಾರ್ಯಕ್ರಮದಡಿ 3620 ನವಸಾಕ್ಷರರು ದಾಖಲಾಗಿ ತರಬೇತಿ ಪೂರ್ಣಗೊಳಿಸಿರುತ್ತಾರೆ.

**2012–13ನೇ ಸಾಲಿನ ಎಸ್‌ಸಿಪಿ ವೃತ್ತಿ ಕೌಶಲ ಕಾರ್ಯಕ್ರಮದ ಪ್ರಗತಿ ವರದಿ**

| ಕ್ರಸಂ | ಜಿಲ್ಲೆ | ಶಿಬಿರಗಳ ಗುರಿ | ನವಸಾಕ್ಷರರ ಗುರಿ | ದಾಖಲಾತಿ | | | ತರಬೇತಿ ಪೂರ್ಣಗೊಳಿಸಿದವರು | | |
|---|---|---|---|---|---|---|---|---|---|
| | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಬಾಗಲಕೋಟೆ | 8 | 160 | 0 | 180 | 180 | 0 | 180 | 180 |
| 2 | ಬಳ್ಳಾರಿ | 7 | 140 | 0 | 140 | 140 | 0 | 140 | 140 |
| 3 | ಬೆಂಗಳೂರು ಗ್ರಾಮಾಂತರ | 7 | 140 | 0 | 140 | 140 | 0 | 140 | 140 |
| 4 | ಬೆಳಗಾವಿ/ಚಿಕ್ಕೋಡಿ | 10 | 200 | 0 | 200 | 200 | 0 | 200 | 200 |
| 5 | ಬೀದರ್ | 8 | 160 | 0 | 160 | 160 | 0 | 160 | 160 |
| 6 | ಗುಲ್ಬರ್ಗಾ | 10 | 200 | 0 | 200 | 200 | 0 | 200 | 200 |
| 7 | ಹಾವೇರಿ | 7 | 140 | 0 | 140 | 140 | 0 | 140 | 140 |
| 8 | ಮಂಡ್ಯ | 8 | 160 | 0 | 160 | 160 | 0 | 160 | 160 |
| 9 | ಕೊಪ್ಪಳ | 7 | 140 | 0 | 220 | 220 | 0 | 220 | 220 |
| 10 | ರಾಯಚೂರು | 7 | 140 | 0 | 200 | 200 | 0 | 200 | 200 |
| 11 | ಬಿಜಾಪುರ | 5 | 100 | 0 | 100 | 100 | 0 | 100 | 100 |
| 12 | ರಾಮನಗರ | 4 | 80 | 0 | 80 | 80 | 0 | 80 | 80 |
| 13 | ಚಿಕ್ಕಬಳ್ಳಾಪುರ | 4 | 80 | 0 | 80 | 80 | 0 | 80 | 80 |
| 14 | ಚಿತ್ರದುರ್ಗ | 9 | 180 | 0 | 180 | 180 | 0 | 180 | 180 |
| 15 | ಗದಗ | 6 | 120 | 0 | 120 | 120 | 0 | 120 | 120 |
| 16 | ಮೈಸೂರು | 9 | 180 | 0 | 180 | 180 | 0 | 180 | 180 |
| 17 | ಯಾದಗಿರಿ | 4 | 80 | 0 | 80 | 80 | 0 | 80 | 80 |
| 18 | ಚಾಮರಾಜನಗರ | 10 | 200 | 0 | 200 | 200 | 0 | 200 | 200 |
| 19 | ತುಮಕೂರು/ಮಧುಗಿರಿ | 10 | 200 | 0 | 200 | 200 | 0 | 200 | 200 |
| 20 | ಕೋಲಾರ | 8 | 160 | 0 | 160 | 160 | 0 | 160 | 160 |
| 21 | ಧಾರವಾಡ | 4 | 80 | 0 | 100 | 100 | 0 | 100 | 100 |
| 22 | ದಾವಣಗೆರೆ | 3 | 60 | 0 | 100 | 100 | 0 | 100 | 100 |
| 23 | ಹಾಸನ | 2 | 40 | 0 | 40 | 40 | 0 | 40 | 40 |
| 24 | ಶಿವಮೊಗ್ಗ | 5 | 100 | 0 | 120 | 120 | 0 | 120 | 120 |
| 25 | ಉತ್ತರಕನ್ನಡ | 2 | 40 | 0 | 60 | 60 | 0 | 60 | 60 |
| 26 | ದಕ್ಷಿಣ ಕನ್ನಡ | 2 | 40 | 0 | 40 | 40 | 0 | 40 | 40 |
| 27 | ಬೆಂಗಳೂರು ನಗರ | 2 | 40 | 0 | 40 | 40 | 0 | 40 | 40 |
| | **ಒಟ್ಟು** | **168** | **3360** | **0** | **3620** | **3620** | **0** | **3620** | **3620** |

**ಗಿರಿಜನ ಉಪ ಯೋಜನೆ:** 2202–04–001–0–03–423 ಅಡಿಯಲ್ಲಿ ರೂ.25.00 ಲಕ್ಷಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಂಡಿರುವ ಹಾಗೂ ಅನುಷ್ಠಾನಗೊಳಿಸಲಾಗುತ್ತಿರುವ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ನವಸಾಕ್ಷರರಾಗಿರುವ 15+ ವಯೋಮಾನದ 1666 ಪರಿಶಿಷ್ಟ ಪಂಗಡದ ನವಸಾಕ್ಷರರಿಗಾಗಿ, 20–30 ಜನರ

ಗುಂಪುಗಳಲ್ಲಿ ವೃತ್ತಿ ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರಗಳನ್ನು ಏರ್ಪಡಿಸುವ ಗುರಿ ಹೊಂದಿದ್ದು, ಈ ಕಾರ್ಯಕ್ರಮದಡಿ 1680 ನವಸಾಕ್ಷರರು ದಾಖಲಾಗಿ ತರಬೇತಿ ಪೂರ್ಣಗೊಳಿಸಿರುತ್ತಾರೆ.

**2012–13ನೇ ಸಾಲಿನ ಟಿಎಸ್‌ಪಿ ವೃತ್ತಿ ಕೌಶಲ ಕಾರ್ಯಕ್ರಮದ ಪ್ರಗತಿ ವರದಿ**

| ಕ್ರಸಂ | ಜಿಲ್ಲೆ | ಶಿಬಿರಗಳ ಗುರಿ | ನವಸಾಕ್ಷರರ ಗುರಿ | ದಾಖಲಾತಿ | | | ತರಬೇತಿ ಪೂರ್ಣಗೊಳಿಸಿದವರು | | |
|---|---|---|---|---|---|---|---|---|---|
| | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಬಾಗಲಕೋಟೆ | 3 | 60 | 0 | 60 | 60 | 0 | 60 | 60 |
| 2 | ಬಳ್ಳಾರಿ | 4 | 80 | 0 | 80 | 80 | 0 | 80 | 80 |
| 3 | ಬೆಂಗಳೂರು ಗ್ರಾಮಾಂತರ | 2 | 40 | 0 | 40 | 40 | 0 | 40 | 40 |
| 4 | ಬೆಳಗಾವಿ/ಚಿಕ್ಕೋಡಿ | 6 | 120 | 0 | 120 | 120 | 0 | 120 | 120 |
| 5 | ಬೀದರ್ | 4 | 80 | 0 | 80 | 80 | 0 | 80 | 80 |
| 6 | ಗುಲ್ಬರ್ಗಾ | 4 | 80 | 0 | 80 | 80 | 0 | 80 | 80 |
| 7 | ಹಾವೇರಿ | 4 | 80 | 0 | 80 | 80 | 0 | 80 | 80 |
| 8 | ಮಂಡ್ಯ | 2 | 40 | 0 | 40 | 40 | 0 | 40 | 40 |
| 9 | ಕೊಪ್ಪಳ | 4 | 80 | 0 | 80 | 80 | 0 | 80 | 80 |
| 10 | ರಾಯಚೂರು | 4 | 80 | 0 | 80 | 80 | 0 | 80 | 80 |
| 11 | ಬಿಜಾಪುರ | 4 | 80 | 0 | 80 | 80 | 0 | 80 | 80 |
| 12 | ರಾಮನಗರ | 0 | 0 | 0 | 0 | 0 | 0 | 0 | 0 |
| 13 | ಚಿಕ್ಕಬಳ್ಳಾಪುರ | 1 | 20 | 0 | 20 | 20 | 0 | 20 | 20 |
| 14 | ಚಿತ್ರದುರ್ಗ | 4 | 80 | 0 | 80 | 80 | 0 | 80 | 80 |
| 15 | ಗದಗ | 4 | 80 | 0 | 80 | 80 | 0 | 80 | 80 |
| 16 | ಮೈಸೂರು | 6 | 120 | 0 | 120 | 120 | 0 | 120 | 120 |
| 17 | ಯಾದಗಿರಿ | 2 | 40 | 0 | 40 | 40 | 0 | 40 | 40 |
| 18 | ಚಾಮರಾಜನಗರ | 5 | 100 | 0 | 100 | 100 | 0 | 100 | 100 |
| 19 | ತುಮಕೂರು/ಮಧುಗಿರಿ | 5 | 100 | 0 | 100 | 100 | 0 | 100 | 100 |
| 20 | ಕೋಲಾರ | 2 | 40 | 0 | 40 | 40 | 0 | 40 | 40 |
| 22 | ದಾವಣಗೆರೆ | 4 | 80 | 0 | 80 | 80 | 0 | 80 | 80 |
| 23 | ಹಾಸನ | 2 | 40 | 0 | 40 | 40 | 0 | 40 | 40 |
| 24 | ಶಿವಮೊಗ್ಗ | 3 | 60 | 0 | 60 | 60 | 0 | 60 | 60 |
| 25 | ಉತ್ತರಕನ್ನಡ | 1 | 20 | 0 | 20 | 20 | 0 | 20 | 20 |
| 26 | ದಕ್ಷಿಣ ಕನ್ನಡ | 1 | 20 | 0 | 20 | 20 | 0 | 20 | 20 |
| 27 | ಕೊಡಗು | 3 | 60 | 0 | 60 | 60 | 0 | 60 | 60 |
| | **ಒಟ್ಟು** | **84** | **1680** | **0** | **1680** | **1680** | **0** | **1680** | **1680** |

**ಸಾಕ್ಷರ ಭಾರತ್ ಕಾರ್ಯಕ್ರಮ ಲೆಕ್ಕಶೀರ್ಷಿಕೆ 2202–04–001–0–05–101** ಅಡಿ ಮಂಜೂರಾಗಿದ್ದ ರೂ.1495.00 ಲಕ್ಷಗಳನ್ನು ಸಾಕ್ಷರ ಭಾರತ್ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರಾಜ್ಯದ ಪಾಲಾಗಿ ಬಳಸಿಕೊಳ್ಳಲಾಗಿದ್ದು, 553309 ಕಲಿಕಾರ್ಥಿಗಳು ದಾಖಲಾಗಿ ಭಾಗ–3ನ್ನು ಪೂರ್ಣಗೊಳಿಸಿರುತ್ತಾರೆ.

| ಕ್ರ. ಸಂ | ಜಿಲ್ಲೆಯ ಹೆಸರು | ಸಾಕ್ಷರ ಭಾರತ ಕಾರ್ಯಕ್ರಮ 2012 | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | | ಪ್ರಾಥಮಿಕೆಯ ಕಲಿಕೆಯನ್ನು ಪೂರ್ಣಗೊಳಿಸಿದವರ ವರ್ಗವಾರು ವಿವರ | | | | | | | | | | | | | | |
| | | ಒಟ್ಟು | | | ಪ.ಜಾ | | | ಪ.ವ | | | ಅಲ್ಪ. ಸಂ | | | ಇತರೆ | | |
| | | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ | ಒಟ್ಟು | ಗಂ | ಹೆ |
| 1 | ಬಾಗಲಕೋಟೆ | 72108 | 12832 | 59276 | 15613 | 3166 | 12447 | 3385 | 2163 | 5548 | 3695 | 680 | 3015 | 49415 | 11149 | 38266 |
| 2 | ಬೆಂಗಳೂರು (ಗ್ರಾ) | 31920 | 10751 | 21169 | 11088 | 3882 | 7206 | 5383 | 1990 | 3393 | 1615 | 408 | 1207 | 13834 | 4471 | 9363 |
| 3 | ಬೆಳಗಾವಿ | 10776 | 6195 | 4581 | 2767 | 1555 | 1212 | 1087 | 226 | 861 | 1191 | 421 | 770 | 5731 | 3993 | 1738 |
| 4 | ಬಳ್ಳಾರಿ | 98885 | 44870 | 54015 | 18159 | 6781 | 11378 | 24095 | 10558 | 13537 | 16440 | 7248 | 9192 | 40190 | 20282 | 19908 |
| 5 | ಬೀದರ್ | 33975 | 7725 | 26250 | 12767 | 2091 | 10676 | 6323 | 1655 | 4668 | 1779 | 566 | 1213 | 13106 | 3413 | 9693 |
| 6 | ಬಿಜಾಪುರ | 100663 | 14418 | 86245 | 20204 | 2883 | 17321 | 10122 | 1729 | 8393 | 18184 | 2595 | 15589 | 52153 | 7211 | 44942 |
| 7 | ಚಾಮರಾಜನಗರ | 60431 | 16807 | 43624 | 34405 | 13506 | 20899 | 14606 | 3522 | 11084 | 492 | 93 | 399 | 10928 | –314 | 11242 |
| 8 | ಚಿತ್ರದುರ್ಗ | 53739 | 14964 | 38775 | 15136 | 0 | 15136 | 10603 | 0 | 10603 | 5220 | 1456 | 3764 | 22780 | 13508 | 9272 |
| 9 | ಗದಗ್ | 8942 | 5892 | 3050 | 1628 | 1257 | 371 | 2503 | 1539 | 964 | 910 | 661 | 249 | 3901 | 2435 | 1466 |
| 10 | ಹಾವೇರಿ | 11467 | 3473 | 7994 | 10364 | 1964 | 8400 | 9595 | 1982 | 7613 | 8462 | 794 | 7668 | –16954 | –1267 | –15687 |
| 11 | ಕೋಲಾರ | 42594 | 12915 | 29679 | 18807 | 5192 | 13615 | 7185 | 2154 | 5031 | 2605 | 1268 | 1337 | 13997 | 4301 | 9696 |
| 12 | ಕೊಪ್ಪಳ | 20881 | 7976 | 12905 | 5087 | 1698 | 3389 | 7533 | 4695 | 2838 | 2878 | 1272 | 1606 | 5383 | 311 | 5072 |
| 13 | ಮಂಡ್ಯ | 106643 | 31895 | 74748 | 26932 | 7791 | 19141 | 3094 | 1064 | 2030 | 1170 | 315 | 855 | 75447 | 22725 | 52722 |
| 14 | ಮೈಸೂರು | 56936 | 17377 | 39559 | 21479 | 6523 | 14956 | 9193 | 3126 | 6067 | 1414 | 441 | 973 | 24850 | 7287 | 17563 |
| 15 | ರಾಯಚೂರು | 49468 | 17520 | 31948 | 15974 | 4245 | 11729 | 5705 | 5389 | 316 | 12290 | 5284 | 7006 | 15499 | 2601 | 12898 |
| 16 | ತುಮಕೂರು | 140328 | 20853 | 119475 | 38846 | 8917 | 29929 | 29709 | 7081 | 22628 | 8449 | 878 | 7571 | 63324 | 3977 | 59347 |
| | ಒಟ್ಟು | 899756 | 246462 | 653294 | 269255 | 71450 | 197805 | 150122 | 44548 | 105574 | 86794 | 24381 | 62413 | 393585 | 106084 | **287501** |
| 17 | ಗುಲ್ಬರ್ಗ | 98400 | 25425 | 72975 | 25470 | 16000 | 9470 | 0 | 0 | 0 | 5730 | 2150 | 3580 | 67200 | 7275 | 59925 |
| 18 | ಯಾದಗಿರಿ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | ಒಟ್ಟು | 98400 | 25425 | 72975 | 25470 | 16000 | 9470 | 0 | 0 | 0 | 5730 | 2150 | 3580 | 67200 | 7275 | **59925** |
| | ಒಟ್ಟಾರೆ | 998156 | 271887 | 726269 | 294725 | 87450 | 207275 | 150122 | 44548 | 105574 | 92524 | 26531 | 65993 | 460785 | 113359 | **347426** |

## 2012–13ನೇ ಸಾಲಿನಲ್ಲಿ ಸಾಧಿಸಿದ ಪ್ರಮುಖ ಸಾಧನೆಗಳು

### 2001ರ ಜನಗಣತಿ ಪ್ರಕಾರ ಸಾಕ್ಷರತಾ ಪ್ರಮಾಣ

| ದೇಶ/ರಾಜ್ಯ | ಒಟ್ಟು | ಪುರುಷ | ಮಹಿಳೆ |
|---|---|---|---|

| | | | |
|---|---|---|---|
| ಭಾರತ | 64.84 | 75.26 | 53.67 |
| ಕರ್ನಾಟಕ | 66.64 | 76.10 | 56.87 |
| ಕರ್ನಾಟಕ ಗ್ರಾಮೀಣ | 59.33 | 70.45 | 40.01 |
| ಕರ್ನಾಟಕ ನಗರ | 80.58 | 86.66 | 75.12 |
| ಕರ್ನಾಟಕ ಪ.ಜಾತಿ | 52.87 | 63.75 | 41.27 |
| ಕರ್ನಾಟಕ ಪ.ಪಂಗಡ | 48.27 | 59.66 | 36.57 |

**2011ರ ಜನಗಣತಿ ಪ್ರಕಾರ ಸಾಕ್ಷರತಾ ಪ್ರಮಾಣ**

| ದೇಶ/ರಾಜ್ಯ | ಒಟ್ಟು | ಪುರುಷ | ಮಹಿಳೆ |
|---|---|---|---|
| ಭಾರತದ | 74.04 | 82.14 | 65.46 |
| ಕರ್ನಾಟಕ | 75.60 | 82.85 | 68.13 |

ಮೇಲ್ಕಂಡಂತೆ 2001 ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತಾ ಪ್ರಮಾಣ ಶೇ.66.64 ಇದ್ದು, ಶೇ. 50ಕ್ಕಿಂತ ಕಡಿಮೆ ಮಹಿಳಾ ಸಾಕ್ಷರತಾ ಪ್ರಮಾಣ ಇರುವ ರಾಜ್ಯದ ಬಾಗಲಕೋಟೆ, ಬಿಜಾಪುರ, ಬಳ್ಳಾರಿ, ಬೀದರ್, ಬೆಂಗಳೂರು (ಗ್ರಾ), ಬೆಳಗಾಂ, ಗದಗ್, ಹಾವೇರಿ, ಕೋಲಾರ, ಕೊಪ್ಪಳ, ಚಾಮರಾಜನಗರ, ಚಿತ್ರದುರ್ಗ, ಮಂಡ್ಯ, ಮೈಸೂರು, ರಾಯಚೂರು, ತುಮಕೂರು, ಗುಲ್ಬರ್ಗ ಮತ್ತು ಯಾದಗಿರಿ 18 ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ ಮಂಜೂರಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ 2011ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತಾ ಪ್ರಮಾಣ ಶೇ.75.60ಗೆ ಹೆಚ್ಚಳವಾಗಿದ್ದು, ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಶೇ.12 ರಷ್ಟು ಹೆಚ್ಚಾಗಿದೆ.

**ಸಾಕ್ಷರ ಭಾರತ್ ಕಾರ್ಯಕ್ರಮ**

- ಸಾಕ್ಷರ ಭಾರತ್ ಕಾರ್ಯಕ್ರಮವು – ಮೂಲ ಸಾಕ್ಷರತೆ, ಸಮಾನ ಶಿಕ್ಷಣ, ವೃತ್ತಿ ಕೌಶಲ ಮತ್ತು ಮುಂದುವರಿಕೆ ಶಿಕ್ಷಣವನ್ನೊಳಗೊಂಡ ಸಮಗ್ರ ಕಾರ್ಯಕ್ರಮ.
- **ಗುರಿ**: 15+ ವಯೋಮಿತಿಯ 40.00 ಲಕ್ಷ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದು.
- **ಅವಧಿ**: 2014 ಮಾರ್ಚ್ ಅಂತ್ಯಕ್ಕೆ ಸಾಕ್ಷರತಾ ಪ್ರಮಾಣ ಶೇಕಡ 80 ಕ್ಕೆ ಏರಿಸುವುದು.
- ಮೊದಲನೇ ಹಂತದಲ್ಲಿ ರಾಜ್ಯದ 16 ಜಿಲ್ಲೆಗಳಿಗೆ ಸಾಕ್ಷರ ಭಾರತ್ ಕಾರ್ಯಕ್ರಮ ಮಂಜೂರಾಗಿದ್ದು, 97 ತಾಲ್ಲೂಕುಗಳು ಮತ್ತು 3170 ಗ್ರಾಮ ಪಂಚಾಯಿತಿಗಳು ಕಾರ್ಯಕ್ರಮದ ವ್ಯಾಪ್ತಿಗೊಳಪಡುತ್ತವೆ.
- ಎರಡನೇ ಹಂತದಲ್ಲಿ ಗುಲ್ಬರ್ಗಾ ಮತ್ತು ಯಾದಗಿರ ಜಿಲ್ಲೆಗೆ ಸಾಕ್ಷರ ಭಾರತ್ ಕಾರ್ಯಕ್ರಮ ಮಂಜೂರಾಗಿದ್ದು, 10 ತಾಲ್ಲೂಕುಗಳ 337 ಗ್ರಾಮ ಪಂಚಾಯಿತಿಗಳು ಕಾರ್ಯಕ್ರಮದ ವ್ಯಾಪ್ತಿಗೊಳಪಡುತ್ತವೆ.
- ಅನುದಾನದ ಶೇ 75:25 ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭರಿಸುವುದಾಗಿದೆ.

**ಮೊದಲನೇ ಹಂತದ ರಾಜ್ಯದ 16 ಜಿಲ್ಲೆಗಳಿಗೆ ಅನುದಾನ ಮಂಜೂರು ಮತ್ತು ಬಿಡುಗಡೆ**

(ರೂ.ಕೋಟಿಗಳಲ್ಲಿ)

| ವಿವರ | ಬಿಡುಗಡೆ | ಅನುದಾನ | ಕೇಂದ್ರದ ಪಾಲು | ರಾಜ್ಯದ ಪಾಲು |
|---|---|---|---|---|

| | ದಿನಾಂಕ | | | |
|---|---|---|---|---|
| ಒಟ್ಟು ಅನುದಾನ ಮಂಜೂರಾತಿ | | 161.00 | 120.75 | 40.25 |
| ಮೊದಲ ಕಂತು ಬಿಡುಗಡೆ | 24.12.2009 | 24.59 | 18.44 | 6.15 |
| ಎರಡನೇ ಕಂತು ಬಿಡುಗಡೆ | 14.03.2011 | 55.91 | 41.93 | 13.98 |
| ಮೂರನೇ ಕಂತು ಬಿಡುಗಡೆ | 21.09.2012 | 48.18 | 36.14 | 12.04 |

**ಎರಡನೇ ಹಂತದ ಗುಲ್ಬರ್ಗಾ ಮತ್ತು ಯಾದಗಿರ ಜಿಲ್ಲೆಗಳಿಗೆ ಅನುದಾನ ಮಂಜೂರು ಮತ್ತು ಬಿಡುಗಡೆ**

(ರೂ.ಕೋಟಿಗಳಲ್ಲಿ)

| ವಿವರ | ಬಿಡುಗಡೆ ದಿನಾಂಕ | ಅನುದಾನ | ಕೇಂದ್ರದ ಪಾಲು | ರಾಜ್ಯದ ಪಾಲು |
|---|---|---|---|---|
| ಒಟ್ಟು ಅನುದಾನ ಮಂಜೂರಾತಿ | | 16.44 | 12.33 | 4.11 |
| ಮೊದಲ ಕಂತು ಬಿಡುಗಡೆ | 16.12.2010 | 4.93 | 3.70 | 1.23 |
| ಎರಡನೇ ಕಂತು ಬಿಡುಗಡೆ | 21.09.2012 | 5.30 | 3.98 | 1.32 |

**ಅನುಷ್ಠಾನ ಸಂಸ್ಥೆಗಳು:**

ಕಾರ್ಯಕ್ರಮ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದಲ್ಲಿ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಮತ್ತು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಹಂತಗಳಲ್ಲಿ ಲೋಕ ಶಿಕ್ಷಣ ಸಮಿತಿಗಳನ್ನು ರಚಿಸಲಾಗಿದೆ.

- ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, 17 ಜಿಲ್ಲಾ ಲೋಕಶಿಕ್ಷಣ ಸಮಿತಿ, 107 ತಾಲ್ಲೂಕು ಲೋಕಶಿಕ್ಷಣ ಸಮಿತಿ, 3507 ಗ್ರಾಮ ಪಂಚಾಯಿತಿ ಜಿಲ್ಲಾ ಲೋಕಶಿಕ್ಷಣ ಸಮಿತಿ ಗಳನ್ನು ರಚಿಸಿ ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ.
- ಕಾರ್ಯಕ್ರಮ ಅನುಷ್ಠಾನಕ್ಕಾಗಿ 05 ರಾಜ್ಯ ಸಂಯೋಜಕರು, 68 ಜಿಲ್ಲಾ ಸಂಯೋಜಕರು, 107 ತಾಲ್ಲೂಕು ಸಂಯೋಜಕರು ಹಾಗೂ 7014 ಪ್ರೇರಕರನ್ನು ಗೊತ್ತುಪಡಿಸಿಕೊಂಡು ತರಬೇತಿ ನೀಡಲಾಗಿದೆ.
- 20 ಜಿಲ್ಲೆಗಳ 3788 ಗ್ರಾ.ಪಂಗಳ ಕುಟುಂಬ ಸಮೀಕ್ಷೆ ಪೂರ್ಣಗೊಂಡಿದ್ದು 69.53 ಲಕ್ಷ ಜನ ಅನಕ್ಷರಸ್ಥರನ್ನು ಗುರುತಿಸಲಾಗಿದೆ.
- ಮೂಲ ಸಾಕ್ಷರತೆಗಾಗಿ ಅನಕ್ಷರಸ್ಥರ ಕಲಿಕೆಗೆ 22 ಲಕ್ಷ **'ಬಾಳಿಗೆ ಬೆಳಕು'** ಪ್ರಾಥಮಿಕೆ ಮತ್ತು 2 ಲಕ್ಷ **'ಬೋಧಕರ ಕೈಪಿಡಿ'** ಮುದ್ರಿಸಿ ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿ ಮತ್ತು ಕಲಿಕಾ ಕೇಂದ್ರಗಳಿಗೆ ಸರಬರಾಜು ಮಾಡಲಾಗಿದೆ.
- ಬಾಳಿಗೆ ಬೆಳಕು ಪ್ರಾಥಮಿಕೆ ಪೂರ್ಣಗೊಳಿಸಿದ ಕಲಿಕಾರ್ಥಿಗಳ ಕಲಿಕೆ ಸ್ಥಿರೀಕರಣಕ್ಕಾಗಿ ಸೇತುಬಂಧ ಕಾರ್ಯಕ್ರಮಕ್ಕೆ 8.20ಲಕ್ಷ **'ಸಾಕ್ಷರ ದೀವಿಗೆ'**, ಪ್ರಾಥಮಿಕೆಗಳನ್ನು ಮುದ್ರಿಸಿ ಗ್ರಾಮ ಪಂಚಾಯಿತಿ, ಲೋಕ ಶಿಕ್ಷಣ ಸಮಿತಿಗಳಿಗೆ ಸರಬರಾಜು ಮಾಡಲಾಗಿದೆ.

**ಪಠ್ಯಾಧಾರಿತ ತರಬೇತಿ:**

- 302 ಸಂಪನ್ಮೂಲ ವ್ಯಕ್ತಿಗಳು ಮತ್ತು 6770 ಮುಖ್ಯ ತರಬೇತುದಾರರಿಗೆ ಪಠ್ಯಧಾರಿತ ತರಬೇತಿ ನೀಡಲಾಗಿದೆ.

- 17 ಜಿಲ್ಲೆಗಳ 68 ಜಿಲ್ಲಾ ಸಂಯೋಜಕರು, 107 ತಾಲ್ಲೂಕು ಸಂಯೋಜಕರುಗಳು ಮತ್ತು 7014 ಪ್ರೇರಕರಿಗೆ ಕಾರ್ಯಕ್ರಮ ಅನುಷ್ಠಾನದ ಆಡಳಿತಾತ್ಮಕ ಮತ್ತು ಪಠ್ಯಾಧಾರಿತ ತರಬೇತಿ ನೀಡಲಾಗಿದೆ.
- 18 ಜಿಲ್ಲೆಗಳಲ್ಲಿ 188851 ಸ್ವಯಂ ಸೇವಕರಿಗೆ ಪಠ್ಯಾಧಾರಿತ ತರಬೇತಿ ನೀಡಿ 182210 ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.
- 17 ಜಿಲ್ಲೆಗಳಲ್ಲಿ ಕಲಿಕಾ ಮತ್ತು ಬೋಧನಾ ಸಾಮಗ್ರಿಗಳನ್ನು ಖರೀದಿಸಿ ಸರಬರಾಜು ಮಾಡಲಾಗಿದೆ.
- 860966 ಕಲಿಕಾರ್ಥಿಗಳು ಬಾಳಿಗೆ ಬೆಳಕು ಕಲಿಕೆಯನ್ನು ಪೂರ್ಣಗೊಳಿಸಿರುತ್ತಾರೆ.

**ವಾತಾವರಣ ನಿರ್ಮಾಣ:**

- ಕಾರ್ಯಕ್ರಮದ ಯಶಸ್ವಿಗಾಗಿ ಮತ್ತು ಕಲಿಕಾ ವಾತಾವರಣದ ನಿರ್ಮಾಣದ ಸಲುವಾಗಿ ಪೋಸ್ಟರ್ಸ್, ಬ್ಯಾನರ್ಸ್, ಮಡಿಕೆ ಹಾಳೆಗಳು, ಕರಪತ್ರ, ಸ್ಟಿಕ್ಕರ್ಸ್‌ಗಳನ್ನು ಬಳಕೆ ಮಾಡಲಾಗಿದೆ.
- ಕಲಿಕಾ ವಾತಾವರಣ ನಿರ್ಮಾಣಕ್ಕೆ ಪೂರಕವಾಗಿ ಅಗತ್ಯವಿರುವ ಬೀದಿ ನಾಟಕಗಳ ಸಾಹಿತ್ಯವನ್ನು ರಚಿಸಿ, ಬೀದಿ ನಾಟಕ ನಿರ್ದೇಶಕರಿಗೆ ಮತ್ತು ತಂಡಗಳ ಕಲಾವಿದರಿಗೆ ತರಬೇತಿ ನೀಡಿ ಬೀದಿ ನಾಟಕ ಪ್ರದರ್ಶನ ನಡೆಸಲಾಗಿದೆ. ವಾರ್ತಾ ಮತ್ತು ಪ್ರಚಾರ ಇಲಾಖೆಯ ಹಾಡು ಮತ್ತು ನಾಟಕ ವಿಭಾಗದಿಂದ ಬೆಳಗಾಂ, ಬಿಜಾಪುರ ಮತ್ತು ಕೋಲಾರ ಈ ಮೂರು ಜಿಲ್ಲೆಗಳಲ್ಲಿ ಕಲಾವಿದರಿಂದ 62 ವಿಶೇಷ ಪ್ರಚಾರ ಕಾರ್ಯಕ್ರಮಗಳನ್ನು ಕಲಾಜಾಥದ ಮೂಲಕ ಹಾಗೂ 2012ರ ಫೆಬ್ರವರಿ 27 ಮತ್ತು 28ರಂದು 2 ದಿನಗಳ ಪುನರ್‌ಮನನ ತರಬೇತಿ ಕಾರ್ಯಾಗಾರ ನಡೆಸಲಾಗಿದೆ.
- 16 ಜಿಲ್ಲೆಗಳ ಬಹುತೇಕ ಗ್ರಾಮ ಪಂಚಾಯಿತಿ/ಗ್ರಾಮ ಗಳಲ್ಲಿ ಕಲಾಜಾಥ, ಸೈಕಲ್ ಜಾಥಾಗಳನ್ನು ನಡೆಸಲಾಗಿದೆ
- ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಹಯೋಗದಲ್ಲಿ ಈಶಾನ್ಯ ಭಾಗದ ಬಿಜಾಪುರ, ಬೀದರ್, ರಾಯಚೂರು, ಕೊಪ್ಪಳ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಆಯ್ದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಫೆಬ್ರವರಿ 2012ರ ಮಾಹೆಯಲ್ಲಿ ರಾಷ್ಟ್ರೀಯ ಮಟ್ಟದ ಸಾಕ್ಷರ ಭಾರತ್ ಯಾತ್ರ ಕಾರ್ಯಕ್ರಮ ನಡೆಸಲಾಗಿದೆ.
- ಆಯ್ದ ಕಲಿಕಾ ಕೇಂದ್ರಗಳಲ್ಲಿ ಆರೋಗ್ಯ ಶಿಬಿರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

**ಪರಿವೀಕ್ಷಣೆ:**

- ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳನ್ನು ಕಾಲಕಾಲಕ್ಕೆ ನಡೆಸಿ ಪ್ರಗತಿ ಪರಿಶೀಲನೆ ಮಾಡಲಾಗುತ್ತಿದೆ.
- ಜಿಲ್ಲೆಗಳ ಕಾರ್ಯಕ್ರಮದ ಪರಿವೀಕ್ಷಣೆಗಾಗಿ ಜಿಲ್ಲಾ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.
- ನೋಡಲ್ ಅಧಿಕಾರಿಗಳು ನೀಡುವ ಪರಿಶೀಲನಾ ವರದಿಗಳನ್ನು ಆಧರಿಸಿ ಜಿಲ್ಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದೆ.

**ನವಸಾಕ್ಷರರ ಕಲಿಕಾ ಮೌಲ್ಯಮಾಪನ/ಪರೀಕ್ಷೆ**

ಕರ್ನಾಟಕ ರಾಜ್ಯದಲ್ಲಿ ಸಾಕ್ಷರ ಭಾರತ್ ಮತ್ತು ಇತರೆ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಓದು–ಬರಹ ಕಲಿತು ನವಸಾಕ್ಷರರಾದವರ ಕಲಿಕಾ ಸಾಮರ್ಥ್ಯ ಅಳೆಯಲು ಪರೀಕ್ಷಾ ಮಾದರಿಯಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲ್ ಇವರ ಸಹಯೋಗದಲ್ಲಿ ಮೌಲ್ಯಮಾಪನ/ಪರೀಕ್ಷೆ ನಡೆಸಲಾಗಿದೆ.

ದಿನಾಂಕ 20.08.2011 ರಂದು ರಾಜ್ಯದ 17 ಜಿಲ್ಲೆಗಳ 3390 ಗ್ರಾಮ ಪಂಚಾಯಿತಿಗಳಲ್ಲಿ ನವಸಾಕ್ಷರರ ಕಲಿಕಾ ಮೌಲ್ಯಮಾಪನ ಪರೀಕ್ಷೆಯನ್ನು ನಡೆಸಲಾಗಿದ್ದು, 486282 ಜನ ನವಸಾಕ್ಷರರು ಪರೀಕ್ಷೆಗೆ ಹಾಜರಾಗಿದ್ದು,

359811 ಜನ ನವಸಾಕ್ಷರರು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಉತ್ತೀರ್ಣರಾದವರಿಗೆ ಎನ್.ಎಲ್.ಎಂ. ಹಾಗೂ ಎನ್.ಐ.ಓ.ಎಸ್ ಇವರ ವತಿಯಿಂದ ಪ್ರಮಾಣ ಪತ್ರ ನೀಡಲಾಗಿದೆ.

ದಿನಾಂಕ 18.03.2012 ರಂದು ರಾಜ್ಯದ 18 ಜಿಲ್ಲೆಗಳ 3507 ಗ್ರಾಮ ಪಂಚಾಯಿತಿಗಳಲ್ಲಿ ನವಸಾಕ್ಷರರ ಕಲಿಕಾ ಮೌಲ್ಯಮಾಪನ ಪರೀಕ್ಷೆಯನ್ನು ನಡೆಸಲಾಗಿದ್ದು, 704415 ಜನ ನವಸಾಕ್ಷರರು ಪರೀಕ್ಷೆಗೆ ಹಾಜರಾಗಿರುತ್ತಾರೆ, ಉತ್ತೀರ್ಣರಾದವರಿಗೆ ಎನ್.ಎಲ್.ಎಂ. ಹಾಗೂ ಎನ್.ಐ.ಓ.ಎಸ್ ಇವರ ವತಿಯಿಂದ ಪ್ರಮಾಣ ಪತ್ರ ನೀಡಲಾಗುವುದು.

**ಸಾಕ್ಷರ ಭಾರತ್ ವೆಬ್‌ಪೋರ್ಟಲ್‌ಗೆ ಅಳವಡಿಸುವಿಕೆ**

ನಿಕ್ (NIC) ನವರು ಸಿದ್ದಪಡಿಸಿರುವ ಸಾಕ್ಷರ ಭಾರತ್ ವೆಬ್‌ಪೋರ್ಟಲ್‌ಗೆ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, 16 ಜಿಲ್ಲೆಗಳ, 97 ತಾಲ್ಲೂಕುಗಳ ಮತ್ತು 3053 ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗಳ ರಚನೆಯನ್ನು ಅಳವಡಿಸಲಾಗಿದೆ. ಅದೇ ರೀತಿ 64 ಜಿಲ್ಲಾ ಸಂಯೋಜಕರು, 97 ತಾಲ್ಲೂಕು ಸಂಯೋಜಕರು ಮತ್ತು 6262 ಪ್ರೇರಕರ ವಿವರವನ್ನು ಅಳವಡಿಸಲಾಗಿದೆ. ಸಾಕ್ಷರ ಭಾರತ್ ಜಿಲ್ಲೆಗಳ ಗ್ರಾಮೀಣ ಪ್ರದೇಶದ ಎಲ್ಲಾ ಕುಟುಂಬಗಳ ಸಮೀಕ್ಷೆ ನಡೆಸಿರುವ ಮಾಹಿತಿ ಸಮೀಕ್ಷೆಯಿಂದ ಗುರುತಿಸಿರುವ ಅನಕ್ಷರಸ್ಥರು ಮತ್ತು ಸ್ವಯಂ ಸೇವಕರ ಮಾಹಿತಿಗಳನ್ನು ಗ್ರಾಮ ಪಂಚಾಯಿತಿವಾರು ಆನ್‌ಲೈನ್‌ನಲ್ಲಿ ಸಾಕ್ಷರ ಭಾರತ್ ವೆಬ್‌ಪೋರ್ಟಲ್‌ಗೆ ಅಳವಡಿಸಲಾಗುತ್ತಿದೆ. ಇದರಿಂದ ವಿಶ್ವದಾದ್ಯಂತ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.

**ಅನುದಾನ – ಹಣಕಾಸು ನಿರ್ವಹಣೆ ವ್ಯವಸ್ಥೆ (Fund Accounts Management System)**

ಸಾಕ್ಷರ ಭಾರತ್ ಕಾರ್ಯಕ್ರಮದಡಿಯಲ್ಲಿ ವೆಬ್‌ಪೋರ್ಟಲ್ ಆಧಾರಿತ ವ್ಯವಸ್ಥೆಯನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರ, ಸೀಡಾಕ್ **(CDAC)** ಸಂಸ್ಥೆಯ ಸಹಯೋಗದಲ್ಲಿ ಅನುದಾನ ಹಣಕಾಸು ನಿರ್ವಹಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿರುತ್ತಾರೆ. ಕಾರ್ಯಕ್ರಮ ಅನುಷ್ಠಾನಕ್ಕೆ ಮುಖ್ಯ ಖಾತೆ ಮತ್ತು ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, 16 ಜಿಲ್ಲೆಗಳ, 97 ತಾಲ್ಲೂಕುಗಳ ಮತ್ತು 3170 ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗಳ ಸಬ್‌ಸೀಡಿಯರಿ ಖಾತೆಗಳ ವ್ಯವಹಾರವನ್ನು ಸಾಕ್ಷರ ಭಾರತ್ ಕಾರ್ಯಕ್ರಮದ ಸೀಡಾಕ್ **(CDAC)** ವೆಬ್‌ಪೋರ್ಟಲ್‌ಗೆ ಅಳವಡಿಸುವುದರ ಮೂಲಕ ಪಾರದರ್ಶಕತೆ, ಜವಾಬ್ದಾರಿತ್ವದೊಂದಿಗೆ ಅನುದಾನದ ಬಳಕೆಯನ್ನು ಪರಿಣಾಮಕಾರಿಯಾಗಿ ಪರಿವೀಕ್ಷಣೆ ಮಾಡಲಾಗುತ್ತಿದೆ.

**ಮಾದರಿ ಲೋಕ ಶಿಕ್ಷಣ ಕೇಂದ್ರ**

ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನದಲ್ಲಿರುವ ಜಿಲ್ಲೆಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಲೋಕ ಶಿಕ್ಷಣ ಕೇಂದ್ರ ತೆರೆಯಲಾಗಿದ್ದು, ಈ ಕೇಂದ್ರಗಳ ಪೈಕಿ ಆಯ್ದ 20 ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಕೇಂದ್ರಗಳನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಮೂಲಕ ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯ ಲಿಮಿಟೆಡ್ ಇವರ ಸಹಯೋಗದಲ್ಲಿ ಮಾಹಿತಿ ತಂತ್ರಜ್ಞಾನದ ಮಾದರಿ ಲೋಕ ಶಿಕ್ಷಣ ಕೇಂದ್ರಗಳಾಗಿ ಮಾರ್ಪಡಿಸಲಾಗುತ್ತಿದ್ದು, ದಿನಾಂಕ:19.10.2011 ಮತ್ತು 20.10.2011 ರಂದು 34 ಮಾದರಿ ಲೋಕ ಶಿಕ್ಷಣ ಕೇಂದ್ರಗಳ ಪ್ರೇರಕರುಗಳಿಗೆ ಮಾಹಿತಿ ತಂತ್ರಜ್ಞಾನದ ಬಳಕೆ ಕುರಿತು ತರಬೇತಿ ನೀಡಲಾಗಿದೆ. ಇದಕ್ಕಾಗಿ ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯ ಲಿಮಿಟೆಡ್ ಇವರು ರೂ.65.00 ಲಕ್ಷ ಅನುದಾನ ನೀಡಿರುತ್ತಾರೆ. ಈ ಅನುದಾನದಲ್ಲಿ ಈ ಕೇಂದ್ರಗಳಿಗೆ ಕಂಪ್ಯೂಟರ್ ಮತ್ತು ಸಂಬಂಧಿಸಿದ ಉಪಕರಣಗಳು, ರೀಡಿಂಗ್ ಟೇಬಲ್ ಮತ್ತು ಖುರ್ಚಿಗಳು, ಪುಸ್ತಕದ ಅಲ್ಮೇರ, ರ್‍ಯಾಕ್, ಮೇಜು, ಖುರ್ಚಿ, ಪ್ರೊಜೆಕ್ಟರ್, ಎಲ್.ಸಿ.ಡಿ. ಟಿ.ವಿ., ಮೈಕ್ ಸೆಟ್, ಡಿ.ವಿ.ಡಿ. ಪ್ಲೇಯರ್, ಫ್ಯಾನ್, ಜಮಖಾನ, ಜನರೇಟರ್, ಸಂಗೀತವಾದ್ಯ ಉಪಕರಣಗಳು ಮತ್ತು ಇತರೆ ಉಪಕರಣಗಳನ್ನು ಕೇಂದ್ರಗಳಿಗೆ ಸರಬರಾಜು ಮಾಡಲಾಗಿದೆ.

ಪ್ರಸ್ತುತ ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಇವರು 20 ಮಾದರಿ ಲೋಕ ಶಿಕ್ಷಣ ಕೇಂದ್ರಗಳಿಗೆ ರೂ.50.00ಲಕ್ಷಗಳನ್ನು ಮತ್ತು ಪವರ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್, ನವದೆಹಲಿ ಇವರು 35 ಮಾದರಿ ಲೋಕ ಶಿಕ್ಷಣ ಕೇಂದ್ರಗಳನ್ನಾಗಿ ಪರಿವರ್ತಿಸಲು 87.50ಲಕ್ಷ ಅನುದಾನ ಮಂಜೂರು ಮಾಡಿದ್ದು, ಕೇಂದ್ರಗಳ ಗುರುತಿಸುವಿಕೆ ಮತ್ತು ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

**ಸತ್ಯನ್ ಮೈತ್ರ ಸಾಕ್ಷರತಾ ಪ್ರಶಸ್ತಿ**

ಘನವೆತ್ತ ರಾಷ್ಟ್ರಪತಿಗಳು ಭಾರತ ಸರ್ಕಾರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಇವರು ಸಾಕ್ಷರ ಭಾರತ್ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ದಿನಾಂಕ 08.09.2011ರಂದು ನವದೆಹಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯ ಸಂದರ್ಭದಲ್ಲಿ ಹಾವೇರಿ ಜಿಲ್ಲೆ, ಶಿಗ್ಗಾವಿ ತಾಲ್ಲೂಕು ಅತ್ತಿಗೇರಿ ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗೆ 2012ರ ಸತ್ಯನ್ ಮೈತ್ರ ಸಾಕ್ಷರತಾ ಪ್ರಶಸ್ತಿ ಪುರಸ್ಕಾರ ಪ್ರಧಾನ ಮಾಡಿರುತ್ತಾರೆ.

ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ/ಸಪ್ತಾಯ ಆಚರಣೆ ಸಂದರ್ಭದಲ್ಲಿ ದಿನಾಂಕ 13.09.2012ರಂದು ನಡೆದ ರಾಜ್ಯ ಮಟ್ಟದ ಸಾಕ್ಷರತಾ ಸಮಾವೇಶದ ಸಂದರ್ಭದಲ್ಲಿ ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗಳು ವಿವಿಧ ಹಂತದ ಅಧಿಕಾರಿ ಕಾರ್ಯಕರ್ತರಿಗೆ ಒಟ್ಟಾರೆ 26 ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಯಿತು.

**ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ: (16 ವಿದ್ಯಾಪೀಠಗಳು)**

ಈ ಹಿಂದೆ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು 2001 ರಲ್ಲಿ ವಿಸರ್ಜನೆಗೊಂಡ ನಂತರ, ಅಲ್ಲಿದ್ದ ಸಂಪೂರ್ಣ ವ್ಯವಸ್ಥೆಯು ಲೋಕ ಶಿಕ್ಷಣ ನಿರ್ದೇಶನಾಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ವಿಸರ್ಜಿತ ಸಮಿತಿಯ ಅಡಿಯಲ್ಲಿ ಇರುವ 16 ವಿದ್ಯಾಪೀಠಗಳ ಪೈಕಿ 3 ವಿದ್ಯಾಪೀಠಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ತರಬೇತಿ ಮತ್ತು ಇನ್ನಿತರೆ ಚಟುವಟಿಕೆಗಳು ನಡೆಸುತ್ತಿಲ್ಲ. ಉಳಿದ 13 ವಿದ್ಯಾಪೀಠಗಳಲ್ಲಿ, 2012–13 ನೇ ಸಾಲಿನಲ್ಲಿ 18–30 ವಯೋಮಿತಿಯ ಗ್ರಾಮೀಣ ಪ್ರದೇಶದ ವಿದ್ಯಾವಂತ ನಿರುದ್ಯೋಗಿ ಯುವಕ–ಯುವತಿಯವರಿಗೆ 2 ಹಂತಗಳಲ್ಲಿ ಡ್ರೆಸ್ ಮೇಕಿಂಗ್ ಮತ್ತು ಬೇಸಿಕ್ ಕಂಪ್ಯೂಟರ್ ಮುಂತಾದ ಆಧುನಿಕ ಜೀವನ ಕೌಶಲ್ಯ ವೃತ್ತಿ ತರಬೇತಿಗಳನ್ನು ನೀಡಲು ಉದ್ದೇಶಿಸಿದ್ದು, ಮೊದಲನೇ ಹಂತದಲ್ಲಿ 520 ವಿದ್ಯಾರ್ಥಿಗಳು ದಾಖಲಾಗಿ, 414 ವಿದ್ಯಾರ್ಥಿಗಳು ತರಬೇತಿಯನ್ನು ಪೂರೈಸಿರುತ್ತಾರೆ. ಅದೇ ರೀತಿ 2ನೇ ಹಂತದಲ್ಲಿ 12 ವಿದ್ಯಾಪೀಠಗಳಲ್ಲಿ 480 ವಿದ್ಯಾರ್ಥಿಗಳು ದಾಖಲಾಗಿದ್ದು, 384 ವಿದ್ಯಾರ್ಥಿಗಳು ತರಬೇತಿಯನ್ನು ಪೂರೈಸಿರುತ್ತಾರೆ.

**2012–13ನೇ ಸಾಲಿನ ವಿದ್ಯಾಪೀಠದ ತರಬೇತಿಗೆ ದಾಖಲಾದವರ ವಿವರ–ಮೊದಲನೇ ತಂಡ**

| ಕ್ರ. ಸಂ | ವಿದ್ಯಾಪೀಠದ ಹೆಸರು | ನಿಗಧಿತ ವಿದ್ಯಾರ್ಥಿಗಳ ಸಂಖ್ಯೆ | ತರಬೇತಿ ಪೂರ್ಣಗೊಳಿಸಿರುವ ಸಂಖ್ಯೆ | ಗಂಡು | ಹೆಣ್ಣು | ಒಟ್ಟು |
|---|---|---|---|---|---|---|
| 1 | ನಂಜನಗೂಡು | 40 | 28 | 0 | 28 | 28 |
| 2 | ಯಗಚಿ | 40 | 36 | 0 | 36 | 36 |
| 3 | ಶಿವಾರಗುಡ್ಡ | 40 | 23 | 0 | 23 | 23 |
| 4 | ಕೆಂಗೇರಿ | 40 | 32 | 12 | 20 | 32 |
| 5 | ತುಂಗಾ | 40 | 38 | 0 | 38 | 38 |
| 6 | ಕಾತ್ರಾಳ್ | 40 | 33 | 0 | 33 | 33 |
| 7 | ಪಂಪಾ | 40 | 27 | 0 | 27 | 27 |
| 8 | ಕಾವೇರಿ | 40 | 18 | 2 | 16 | 18 |

| | | | | | | |
|---|---|---|---|---|---|---|
| 9 | ವರದಾ | 40 | 35 | 28 | 7 | 35 |
| 10 | ನವಿಲಗಿರಿ | 40 | 31 | 18 | 17 | 35 |
| 11 | ಬಸವಕಲ್ಯಾಣ | 40 | 39 | 24 | 7 | 31 |
| 12 | ಬಂಥನಾಳ | 40 | 39 | 0 | 39 | 39 |
| 13 | ಏನಿಗದೆಲೆ | 40 | 35 | 0 | 39 | 39 |
| | ಒಟ್ಟು | 520 | 414 | 84 | 330 | 414 |

**2012–13ನೇ ಸಾಲಿನ ವಿದ್ಯಾಪೀಠದ ತರಬೇತಿಗೆ ದಾಖಲಾದವರ ವಿವರ–ಎರಡನೇ ತಂಡ**

| ಕ್ರ. ಸಂ | ವಿದ್ಯಾಪೀಠದ ಹೆಸರು | ನಿಗಧಿತ ವಿದ್ಯಾರ್ಥಿಗಳ ಸಂಖ್ಯೆ | ತರಬೇತಿ ಪೂರ್ಣಗೊಳಿಸಿರುವ ಸಂಖ್ಯೆ | ಗಂಡು | ಹೆಣ್ಣು | ಒಟ್ಟು |
|---|---|---|---|---|---|---|
| 1 | ನಂಜನಗೂಡು | 40 | 27 | 0 | 27 | 27 |
| 2 | ಯಗಚಿ | 40 | 16 | 0 | 16 | 16 |
| 3 | ಶಿವಾರಗುಡ್ಡ | 40 | 33 | 0 | 33 | 33 |
| 4 | ಕೆಂಗೇರಿ | 40 | 35 | 12 | 23 | 35 |
| 5 | ತುಂಗಾ | 40 | 30 | 17 | 13 | 30 |
| 6 | ಕಾತ್ರಾಳ್ | 40 | 37 | 0 | 37 | 37 |
| 7 | ಪಂಪಾ | 40 | 37 | 0 | 37 | 37 |
| 8 | ಕಾವೇರಿ | 40 | 30 | 13 | 17 | 30 |
| 9 | ವರದಾ | 40 | 39 | 27 | 12 | 39 |
| 10 | ನವಿಲಗಿರಿ | 40 | 32 | 12 | 20 | 32 |
| 11 | ಬಸವಕಲ್ಯಾಣ | 40 | 36 | 24 | 12 | 36 |
| 12 | ಏನಿಗದೆಲೆ | 40 | 32 | 0 | 32 | 32 |
| | ಒಟ್ಟು | 480 | 384 | 105 | 279 | 384 |

2012–13 ನೇ ಸಾಲಿಗೆ ವಿಸರ್ಜಿತ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಲೆಕ್ಕಶೀರ್ಷಿಕೆ 2202–04–101–0–01 ಅಡಿ ಮಂಜೂರಾಗಿದ್ದ ರೂ.50.00 ಲಕ್ಷಗಳಲ್ಲಿ ಬಿಡುಗಡೆಯಾದ ಮೊತ್ತದಲ್ಲಿ 50.00 ಲಕ್ಷಗಳನ್ನು ವಿಸರ್ಜಿತ ಸಮಿತಿಯ ಅಭಿವೃದ್ಧಿ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗಿದೆ.

**ಇತರೆ ವಿವರಗಳು:**

**1. ದೂರು ನಿವಾರಣಾ ವಿಭಾಗ:**

ಲೋಕ ಶಿಕ್ಷಣ ನಿರ್ದೇಶನಾಲಯದಲ್ಲಿ ದೂರು ನಿವಾರಣಾ ವಿಭಾಗವು ಕರ್ತವ್ಯ ನಿರ್ವಹಿಸುತ್ತಿದ್ದು. ಪ್ರತಿ ಮಾಹೆಯ ಮೊದಲನೆ ಶನಿವಾರ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ.

**2. ಇ–ಆಡಳಿತ ವಿಭಾಗ:**

ಲೋಕ ಶಿಕ್ಷಣ ನಿರ್ದೇಶನಾಲಯದಲ್ಲಿ ಇ–ಆಡಳಿತ ವಿಭಾಗ ಕರ್ತವ್ಯ ನಿರ್ವಹಿಸುತ್ತಿದ್ದು ಎಲ್ಲಾ ಜಿಲ್ಲೆಗಳಿಂದ ವಿವಿಧ ಕಾರ್ಯಕ್ರಮದ ಮಾಹಿತಿಗಳನ್ನು ಇಂಟರ್ ನೆಟ್ ಮುಖಾಂತರ ತರಿಸಿ ವಿಷಯಗಳನ್ನು ಶೀಘ್ರ ವಿಲೇವಾರಿ ಮಾಡಲಾಗುತ್ತಿದೆ Website ಅಭಿವೃದ್ಧಿಗೊಳಿಸಿ ಇಂದೀಕರಿಸಲಾಗುತ್ತಿದೆ. ಎಲ್ಲಾ ಜಿಲ್ಲೆಗಳಿಗೆ BSNL Broad Band Internet ಸೇವೆ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಜಿಲ್ಲಾ ಸಾಕ್ಷರತಾ ಸಮಿತಿಗಳಿಗೆ ಹಾಗೂ

ನಿರ್ದೇಶನಾಲಯಕ್ಕೆ e-mail ವಿಳಾಸಗಳನ್ನು ಸಿದ್ಧಪಡಿಸಿ ವರದಿಗಳನ್ನು e-mail ಮತ್ತು ಫ್ಯಾಕ್ಸ್ ಮೂಲಕ ನೀಡಲಾಗುತ್ತಿದೆ.

3. **ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ:**

ಕರ್ನಾಟಕ ರಾಜ್ಯ ಸಾಕ್ಷರತಾ ಮಿಶನ್ ಪ್ರಾಧಿಕಾರವು ಒಂದು ನೊಂದಾಯಿತ, ಸ್ವಾಯತ್ತ ಸಂಸ್ಥೆಯಾಗಿದ್ದು ರಾಜ್ಯದಲ್ಲಿ ಸಾಕ್ಷರತಾ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಿ, ಮೇಲುಸ್ತುವಾರಿ ಮಾಡುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಪ್ರಾಧಿಕಾರದ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದು, ಇಲಾಖೆ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರು ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿದ್ದು, ಸರ್ಕಾರದ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ ಇವರು ಉಪಾಧ್ಯಕ್ಷರಾಗಿರುತ್ತಾರೆ. ಎರಡೂ ಸಮಿತಿಗಳಿಗೆ ಲೋಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.